ಮಗನ ತಾಯಿಯೂ ಇಚ್ಛಿಸಿರಲಿಕ್ಕಿಲ್ಲ. ಹುಡುಗ ಹೇಗೋ ದಿನದೂಡಿಕೊಂಡು ಉಳಿಯುವುದಲ್ಲ. ಅವನಿಗೆ ಕೆಲಸ ಸಿಗಬೇಕು ಖುಷಿಯಾಗಿರಬೇಕು ಎಂದಷ್ಟೇ ಇಬ್ಬರೂ ಹೃದಯಪೂರ್ತಿ ಹಾರೈಸಿದ್ದರು. ಉಳಿವು ಮಹತ್ವದ ವಿಚಾರ. ಬಾಕಿ ಎಲ್ಲ ಅದರ ಜೊತೆ ಬರುವಂತಹದ್ದು.

ಮಗನೊಬ್ಬ ಹೆತ್ತವರನ್ನು ಅಷ್ಟು ಅಗೌರವದಿಂದ ಕಾಣುವುದು ಅದೂ ಕೆಲಸ ಸಿಗುವ ಮೊದಲೇ, ಅಪ್ಪನನ್ನು ಅಸಹಾಯಕನನ್ನಾಗಿ ಮಾಡಿತ್ತು. ಒಂದೊಮ್ಮೆ ಕೆಲಸ ಸಿಕ್ಕಿದ ಮೇಲೆ ಹುಡುಗ ಏನು ಮಾಡಬಹುದು?

ತಂದೆಯ ಆತಂಕ ಅವನ ಬಗೆಗಾಗಿರಲಿಲ್ಲ. ಬದಲಾಗಿ ಮರಣಾನಂತರ ಹೆಂಡತಿ ಮತ್ತು ಇಬ್ಬರು ಸಣ್ಣ ಮಕ್ಕಳ ಕುರಿತದ್ದಾಗಿತ್ತು. ಶೌಕತ್, ಅಮ್ಮ ಹಾಗೂ ಇಬ್ಬರು ತಮ್ಮಂದಿರನ್ನು ನೋಡಿಕೊಳ್ಳುವಲ್ಲಿ ಹೆಗಲು ಕೊಡುತ್ತಾನೆ ಎಂದು ಒಮ್ಮೆ ಅವನು ಸಂಪೂರ್ಣ ನಂಬಿಕೊಂಡದ್ದಿದೆ. ಮಗನನ್ನು ಅನಕ್ಷರಸ್ಥನನ್ನಾಗಿ ಇಡಲಿಲ್ಲ, ತನ್ನೆಲ್ಲವನ್ನೂ ವ್ಯಯಿಸಿ ವಿದ್ಯಾವಂತನಾಗಿಸಿದ್ದ. ಒಬ್ಬ ವಿದ್ಯಾವಂತ ಮಗ ಎಂದರೆ ಲಕ್ಷ ರೂಪಾಯಿಗೆ ಸಮ. ಎಳೆಯ ಮಕ್ಕಳು ಪರೀಕ್ಷೆಯಲ್ಲಿ ಪಾಸಾದರೆ ಮಾತ್ರ ಅವನ ವ್ಯಾಕುಲತೆ ಕಡಿಮೆ ಆಗಬಹುದಿತ್ತು. ಆಗ ಕಿರಿಯ ಮಕ್ಕಳು ತಮ್ಮ ಕಾಲ ಮೇಲೆ ನಿಲ್ಲಬಹುದಾಗಿತ್ತು, ಅಮ್ಮನನ್ನು ನೋಡಿಕೊಳ್ಳದಿದ್ದರೆ ಹೋಗಲಿ. ಸಾಯುವ ತನಕ ಅವಳ ಹೊಟ್ಟೆ ಬಟ್ಟೆ ನೋಡಿಕೊಳ್ಳುವ ಶಕ್ತಿ ಖಂಡಿತ ಅವಳಿಗಿದೆ. ಎಲ್ಲದರ ಸಾರಾಂಶ ಎಂದರೆ ತನ್ನ ಬಳಿ ಇದ್ದುದೆಲ್ಲವನ್ನೂ ಶೌಕತ್‌ನ ಮೇಲೆ ಖರ್ಚು ಮಾಡಿಯಾಗಿತ್ತು. ಉಳಿದಿಬ್ಬರಿಗೆ ಏನೂ ಇರಲಿಲ್ಲ. ಅಗತ್ಯ ಬಿದ್ದಾಗ ಶೌಕತ್ ಮನೆಯ ಜವಾಬ್ದಾರಿಗೆ ಹೆಗಲು ಕೊಡಲು ತಯಾರಿಲ್ಲದಿದ್ದರೆ ಬೇರೆ ಹಾದಿಯೇ ಇರಲಿಲ್ಲ. ತಂದೆಗೆ ವಯಸ್ಸಾಗುತ್ತಿತ್ತು. ಮೊದಲಿನಷ್ಟು ಆತ್ಮವಿಶ್ವಾಸವೂ ಇರಲಿಲ್ಲ.

ಶೌಕತ್ ಈಗ ಪ್ರಬುದ್ಧ. ಅವನ ದಾರಿ ಬದಲಾಗುವುದು ಸಹಜ. ಅದರರ್ಥ ಮನೆಯ ಪದ್ಧತಿ ನೆಮ್ಮದಿಗಳನ್ನು ಬಲಿ ಕೊಟ್ಟು ಅಲ್ಲ. ಶೌಕತ್‌ನಿಗೆ ಬಹಳಲ್ಲ ಅರ್ಥ ಆಗುತ್ತದೆ, ಆದರೆ ಈ ಸರಳ ಸತ್ಯ ಅವನ ಗ್ರಹಿಕೆಗೆ ಬರಲಿಲ್ಲ. ಒಂದು ವೇಳೆ ಅವನೂ ಮಗನನ್ನು ಅವಾಚ್ಯವಾಗಿ ನಿಂದಿಸಿದ್ದರೆ ಮನಸಿನ ಭಾರ ಇಳಿಯುತ್ತಿತ್ತೇನೋ. ಆದರೆ ನೀಚ ಭಾಷೆಯಲ್ಲಿ ಪ್ರತ್ಯುತ್ತರ ನೀಡುವುದು ಅವನಿಗೆ ಸಾಧ್ಯ ಇರಲಿಲ್ಲ.

ಅಪರಿಚಿತರಿಂದ ಅವನಿಗೆ ಗೌರವ ಸಿಗುತ್ತಿತ್ತು ಆದರೆ, ಮೊದಲ ಮಗ ಇತರರ ಕಣ್ಣಲ್ಲಿ ಅವನನ್ನು ಕಿರಿದು ಮಾಡಿದ್ದ. ತಾನೇ ಕಟ್ಟಿದ ಕುಟುಂಬಕ್ಕೆ ಬೇಡದವನಾಗಿದ್ದ. ಈ ಯೋಚನೆ ಬಂದ ಕೂಡಲೇ ತಾನೊಂದು ದೂಳಿನಂತೆ ಅನಿಸತೊಡಗಿತು. ಬದುಕಿನುದ್ದದ ನಿರಂತರ ಉಳಿವಿನ ಹೋರಾಟದಲ್ಲಿ ಮಗನಿಂದ ಸುಖ ನೆಮ್ಮದಿ ಸಿಗಬಹುದೆಂದು ಯೋಚಿಸಿದ್ದರೆ ಆ ಮಗನೇ ಮಾತು ಕೃತಿಯಲ್ಲಿ ವಿರುದ್ಧ ನಿಂತಿದ್ದ, ತಂದೆಯ ಮೂಲಭೂತ ಅಸ್ತಿತ್ವವನ್ನೇ ಅಪಮಾನಿಸುತ್ತಿದ್ದ. ತಂದೆ ಮುದುಕನಾಗಲು ಶೌಕತ್ ಇಪ್ಪತ್ತೈದು ವರ್ಷ ಕಾದು ಆಮೇಲೆ ಇಲ್ಲಿಯತನಕದ ತಾಳ್ಮೆಯ ವಿಧೇಯತೆಗೆ ಬೆನ್ನು ತಿರುಗಿಸಿದಂತೆ ಆಗಿತ್ತು. ಶೌಕತ್‌ನ ಸಹಕಾರ ಇಲ್ಲದಿದ್ದರೆ ಪ್ರೀತಿಯ ಕುಟುಂಬ ಚೂರಾಗುತ್ತದೆಂದು ಅವನಿಗೆ ಗೊತ್ತಿತ್ತು. ಆದರೂ ಅವನಿಗಿನ್ನು ಮಗನ ಸಹಾಯ ಬೇಕಿರಲಿಲ್ಲ. ಮಗನ ಸೊಕ್ಕಿನ ವರ್ತನೆಯಲ್ಲಿ ಎಲ್ಲ ಹಾಳಾಗುವುದಕ್ಕಿಂತ ಹಸಿವಿನ ಬಡತನದ ಸಾವೇ ಅಡ್ಡಿಲ್ಲ ಅನಿಸಿತ್ತು.

ಇಡೀ ಅಪರಾಹ್ನ ಶೌಕತ್‌ನ ಬಿಗಿ ಮುಖವನ್ನು ನೋಡಿದಾಗಲೇ ಹೆಂಡತಿ ಇನ್ನೇನು ಸಾಯುವವಳಂತೆ ಅತಿ ನಿಧಾನದಲ್ಲಿ ನಡೆದಾಡುವಾಗಲೇ ಕೆಲಸ ಸಿಗಲಿಲ್ಲ ಎಂದು ಗೊತ್ತಾಗಿತ್ತು. ಮಗನ ಕಣ್ಣು ಊದಿಕೊಂಡಿದ್ದವು. ಬಹುಶಃ ಅಳುತ್ತಿದ್ದಿರಬೇಕು. ಎಲ್ಲ ಗೊತ್ತಾಗುತ್ತಿದ್ದರೂ ಕೇಳಿದ, 'ಏನಾಯಿತು? ಯಾರನ್ನು ತೆಗೆದುಕೊಂಡರು?' ಶೌಕತ್ ಮಾತನಾಡಲಿಲ್ಲ. ಏನೆಂದು ಹೇಳುತ್ತಿದ್ದ? ಕೆಲಸ ಸಿಕ್ಕಿ ಮನೆಯಿಂದ ಹೊರಹೋಗಬಹುದು ಎಂದು ಯೋಚಿಸಿದ್ದ. ಈಗ ಬೇರೆ ದಾರಿ ಇರಲಿಲ್ಲ. ಅಮ್ಮ ಅಕ್ಕಿ ಸ್ವಚ್ಛ ಮಾಡುವ ಗೆರಸಿ ಹಿಡಿದು ಅಡುಗೆ ಮನೆಯ ಕಡೆ ನಡೆಯುತ್ತಿದ್ದಳು. ಗಂಡನಿಗೆ 'ನಿಜವಾಗಲೂ? ನೀನು ಹೇಳುವುದು ಅರ್ಥವೇ ಆಗುತ್ತಿಲ್ಲ' ಎಂದಳು.

ಶೌಕತ್‌ನ ಕನಸುಗಳು ಸತ್ತುಹೋಗಿದ್ದವು. ಅವನೀಗ ವೀಕ್ಷಿಸಲ್ಪಡುವ ವಸ್ತುವಾಗಿದ್ದ, ಅಪ್ಪ ಪ್ರೇಕ್ಷಕನಾಗಿದ್ದ. ಅಮ್ಮ ಅವರಿಬ್ಬರ ಮಧ್ಯದ ಪರದೆಯಾಗಿ, ಇಬ್ಬರನ್ನೂ ಮುಟ್ಟುತ್ತಾ ಜೀವನದ ಭಾರವನ್ನು ಹೊತ್ತು ಚಲಿಸಲು ಸಾಧ್ಯವಿಲ್ಲದವಳಾಗಿದ್ದಳು.

●